ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE: 25/3/2021

# ಶಾಸಕರಿಗೆ ಸಂಕಟ ಸರ್ಕಾರಕ್ಕೆ ಪೇಚಾಟ

## ಸಚಿವ ಡಾ.ಕೆ.ಸುಧಾಕರ್ ಸವಾಲಿಗೆ ಜನಪ್ರತಿನಿಧಿಗಳು ಸುಸ್ತೋಸುಸ್ತು

25-3-21

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಆಡಿದ ಸವಾಲಿನ ಮಾತು ಸರ್ಕಾರವನ್ನು ಅಕ್ಷರಶಃ ಪೇಚಿಗೆ ಸಿಲುಕಿಸಿತು. ಆಡಳಿತ ಪಕ್ಷದ ಶಾಸಕರು, ಸಚಿವರು ಸುಧಾಕರ್ ಅವರನ್ನು ಸಮರ್ಥಿಸಿಕೊಳ್ಳಲಾಗದ ಸ್ಥಿತಿಯಲ್ಲಿ ನಲುಗಿಹೋದರು. ವಿಧಾನಸಭೆ ಅಧಿವೇಶನ ನಡೆಯುವ ಸಂದರ್ಭದಲ್ಲಿಯೇ ಧುತ್ತೆಂದು ಎದುರಾದ ಸವಾಲನ್ನು ದಾಟಲು ಆಡಳಿತ ಪಕ್ಷ ಪಡಿಪಾಟಲು ಪಟ್ಟಿತು. ಇನ್ನೊಂದೆಡೆ, ಸಚಿವರ ವಿರುದ್ಧ ಕೆಲವು ಶಾಸಕರು ಪ್ರತಿಕ್ರಿಯೆ ನೀಡಿ ಸರ್ಕಾರಕ್ಕೆ ಮುಜುಗರ ಉಂಟು ಮಾಡಿದರು. ವಿಧಾನಸಭೆಯಲ್ಲಿ ಮಾತನಾಡಿದ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಸುಧಾಕರ್ ಸದನದ ಹೊರಗೆ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆ ಬಗ್ಗೆ ನಿಮಗೆ ಆಕ್ಷೇಪ ಇದ್ದರೆ ಸದನದ ಹೊರಗೆ ಪ್ರಶ್ನಿಸಿ ಎಂದರು.

**ಗದರಿದ ಸ್ಪೀಕರ್:** ವಿಧಾನಸಭೆಯನ್ನು ಅನಿರ್ದಿಷ್ಟಾವಧಿಗೆ ಮುಂದೂಡುವ ಮುನ್ನ ಮಾತನಾಡಿದ ಸ್ಪೀಕರ್, ಸಚಿವರು ಯಾರು ಸಹ ಇಂತಹ ಹೇಳಿಕೆ ನೀಡುವುದು ಸರಿಯಲ್ಲ. ಇದು ಶಾಸಕರ ಗೌರವದ ಪ್ರಶ್ನೆ ಎಂದು ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡರು. ಒಂದು ಹಂತದಲ್ಲಿ ಕಾಂಗ್ರೆಸ್ ಶಾಸಕಿಯರು ಸ್ಪೀಕರ್ ಪೀಠದ ಮೆಟ್ಟಿಲು ಹತ್ತಿ ಆಕ್ಷೇಪ ವ್ಯಕ್ತಪಡಿಸಲು ಮುಂದಾದರು. ಈ ರೀತಿ ಮಾಡುವುದು ಸರಿಯಲ್ಲ ಎಂದು ಸ್ಪೀಕರ್ ಗದರಿದರು.

### ಇನ್ನೂ ಸಿಡಿ ಇರಬಹುದು!

ಸುಧಾಕರ್ ಸೇರಿ ಆರು ಸಚಿವರ ರಾಜೀನಾಮೆಗೆ ಒತ್ತಾಯಿಸಿದ್ದೇವೆ. ಇನ್ನೂ ಸಿಡಿಗಳು ಇರಬಹುದು, ಅದಕ್ಕೆ ವಿಲಿವಿಲಿ ಎಂದು ಒದ್ದಾಡುತ್ತಿದ್ದಾರೆ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಛೇಡಿಸಿದರು. ಸುಧಾಕರ್ ಮಾತಿನ ಪ್ರಕಾರ ವಿಧಾನಸಭಾ ಸ್ಪೀಕರ್, ಸಿಎಂ ಸೇರಿ ರಾಜ್ಯದ 225 ಶಾಸಕರೂ ಸತ್ಯವಂತರಲ್ಲ. ಒಬ್ಬ ಸಚಿವರಾಗಿ ಈ ರೀತಿ ಹೇಳಿರುವುದು ಅವರ ಬೇಜಾವಾಬ್ದಾರಿ ತೋರಿಸುತ್ತದೆ ಎಂದರು.




ಆರು ಸಚಿವರ ವಿರುದ್ಧ ನಿರಂತರ ತೇಜೋವಧೆ, ಆರೋಪ ಮಾಡುತ್ತಿರುವಾಗ ನಮಗಾದ ಅವಮಾನ, ನೋವು ಯಾರಿಗೂ ಅರಿವಾಗಲಿಲ್ಲ. ಈಗ ನನ್ನ ಹೇಳಿಕೆಯನ್ನು ಶಬ್ದಶಃ ಅರ್ಥೈಸದೆ ನಮ್ಮ ಭಾವನೆಗಳ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕೆಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಸ್ಪಷ್ಟಪಡಿಸಿದ್ದಾರೆ. ರಾಜಕೀಯ ಷಡ್ಯಂತ್ರದ ಪರಿಣಾಮ ಇತ್ತೀಚೆಗೆ ಆಗಿರುವ ಕೆಲ ಆಘಾತಕಾರಿ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪರಿಣತರು, ಹಿರಿಯರ ಸಲಹೆ ಸೂಚನೆ ಮೇರೆಗೆ ನಾವು ನಮ್ಮ ಹಕ್ಕುಗಳ ರಕ್ಷಣೆಗೆ ಸಾಂವಿಧಾನಿಕವಾಗಿ ಲಭ್ಯ ಇರುವ ಅವಕಾಶಗಳ ಅಡಿಯಲ್ಲಿ ಉಪಕ್ರಮಕ್ಕೆ ಮುಂದಾಗಿದ್ದು ನಿಜ. ಅದರ ಅರ್ಥ ನಾವೇನೋ ಅಪರಾಧ ಎಸಗಿದ್ದೇವೆ ಅಂತಲ್ಲ. ಹೀಗೆ ಕಾನೂನು ರಕ್ಷಣೆಯ ಮೊರೆ ಹೋಗಿದ್ದು ನಾವೇ ಮೊದಲಲ್ಲ, ಕೊನೆಯೂ ಆಗಲಾರದು ಎಂದು ಹೇಳಿದ್ದಾರೆ. ಇದೆಲ್ಲ ತಿಳಿದೂ ಕೆಲ ಹಿರಿಯ ನಾಯಕರು ನಮ್ಮ ತೇಜೋವಧೆ ಮಾಡಿ, ವ್ಯಕ್ತಿತ್ವಕ್ಕೆ ಕಳಂಕ ತಂದು ನಮ್ಮ ಸಾರ್ವಜನಿಕ ಜೀವನಕ್ಕೆ ಇತಿಶ್ರೀ ಹೇಳಲು ಮುಂದಾದಾಗ ಅನಿವಾರ್ಯವಾಗಿ ಮನಸ್ಸಿಗಾದ ನೋವನ್ನು ಬಹಿರಂಗವಾಗಿ ತೋಡಿಕೊಂಡಿದ್ದೇನೆ. ನನ್ನ ಹೇಳಿಕೆ ಹಿಂದೆ ಇರುವ ನನ್ನ ಮನಸ್ಸಿನ ವೇದನೆ ಅರ್ಥ ಮಾಡಿಕೊಳ್ಳಬೇಕೇ ವಿನಾ ನಾನಾಡಿದ ಮಾತುಗಳ ಶಬ್ದಶಃ ವ್ಯಾಖ್ಯಾನ ಮಾಡಕೂಡದೆಂದು ವಿನಮ್ರವಾಗಿ ಕೋರುತ್ತೇನೆ ಎಂದಿದ್ದಾರೆ.

### ನನಗೆ ಒಬ್ಬಳೇ ಹೆಂಡತಿ



ನನಗಿರುವುದು ಒಬ್ಬಳೇ ಹೆಂಡತಿ, ಒಂದೇ ಸಂಸಾರ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಪ್ರತಿಕ್ರಿಯಿಸಿದರು. ಸುಧಾಕರ್ ನುಡಿಮುತ್ತುಗಳನ್ನು ಇಡೀ ರಾಜ್ಯಕ್ಕೆ ಕೊಟ್ಟಿದ್ದಾರೆ. ಇದು ಇಲ್ಲಿ ಚರ್ಚೆ ಮಾಡುವ ವಿಚಾರವಲ್ಲ, ಸದನದಲ್ಲಿ ಚರ್ಚೆಯಾಗಬೇಕು ಎಂದರು.

ನಾನು ಯಾವ ದೇವರ ಮೇಲಾದರೂ ಆಣೆ ಮಾಡುತ್ತೇನೆ, ನನಗೆ ಒಬ್ಬಳೇ ಹೆಂಡತಿ, ಯಾವ ಅನೈತಿಕ ಸಂಬಂಧವನ್ನೂ ಇಟ್ಟುಕೊಂಡಿಲ್ಲ. ಅವರ ಹೇಳಿಕೆ ತಪ್ಪು, ನೂರಕ್ಕೆ ನೂರು ನಾವು ಏಕ ಪತ್ನಿ ವ್ರತಸ್ಥರೇ.

| ಶಿವಲಿಂಗೇಗೌಡ ಜೆಡಿಎಸ್ ಶಾಸಕ

ಯಾರೂ ಶ್ರೀರಾಮಚಂದ್ರ, ಸೀತೆಮಾತೆಯಲ್ಲ, ಒಂದು ಬೆರಳು ಇತರರನ್ನು ತೋರಿದರೆ 4 ಬೆರಳು ಅವರ ಕಡೆಯೇ ತೋರಿಸುತ್ತದೆ. ಎಲ್ಲರೂ ಆತ್ಮ ಮುಟ್ಟಿ ನೋಡಿಕೊಳ್ಳಲಿ.

| ಬಿ.ಸಿ.ಪಾಟೀಲ್ ಸಚಿವ

ರಾಜ್ಯ, ಕೇಂದ್ರ 2 ಕಡೆ ಅವರದ್ದೇ ಸರ್ಕಾರವಿದೆ. ಯಾವ ತನಿಖೆ ಬೇಕಾದರೂ ಮಾಡಲಿ. ಬೇಕಾದರೆ ರಾಮನ ದೇವಸ್ಥಾನಕ್ಕೆ ಹೋಗಿ ಬನ್ನಿ ಅಂದ್ರೆ ಹೋಗ್ತೀವಿ.

| ಎಚ್.ಡಿ.ರೇವಣ್ಣ ಶಾಸಕ



### ಒಮ್ಮೆ ತಪ್ಪು ಮಾಡಿ ಒಪ್ಪಿಕೊಂಡಿದ್ದೇನೆ

ಜೀವನದಲ್ಲಿ ಒಮ್ಮೆ ತಪ್ಪು ಮಾಡಿದ್ದೇನೆ. ಅದನ್ನು ಧೈರ್ಯವಾಗಿ ಹೇಳಿದ್ದೇನೆ. ಇಲ್ಲಿ ಇರೋ ಎಲ್ಲರ ಮನೆಯ ದೋಸೆಯೂ ತೂತೆ ಎಂದು ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಅವರು ಸುಧಾಕರ್ ಹೇಳಿಕೆಗೆ ತಿರುಗೇಟು ನೀಡಿದ್ದಾರೆ. ಭೂಮಿ ಮೇಲೆ ಇರುವ ಪ್ರತಿಯೊಂದು ಜೀವಿಗಳಿಗೆ ಸಹಜವಾದ ಪ್ರಕ್ರಿಯೆ ಇರುತ್ತದೆ. ಅದನ್ನು ಅರ್ಥ ಮಾಡಿಕೊಳ್ಳಬೇಕು. ವಿನಾಕಾರಣ ನನ್ನ ಹೆಸರನ್ನು ಏಕೆ ಎಳೆದು ತರಬೇಕು? ಇಂತಹ ವಿಚಾರಗಳನ್ನು ಚರ್ಚೆ ಮಾಡಿ ಏಕೆ ನಗೆಪಾಟಲಿಗೀಡಾಗುತ್ತೀರಿ ಎಂದು ಕಿಡಿಕಾರಿದ್ದಾರೆ.

ಸುಧಾಕರ್ ಏನು ಹೇಳಿದ್ದಾರೆ ಎನ್ನುವುದು ಗಮನಕ್ಕೆ ಬಂದಿಲ್ಲ. ಹಾಗೆ ಹೇಳಿದ್ದರೆ ಅದು ಖಂಡನೀಯ. ಜವಾಬ್ದಾರಿ ಅರಿತು ಮಾತನಾಡಬೇಕಿತ್ತು.

| ಶಶಿಕಲಾ ಜೊಲ್ಲೆ ಸಚಿವೆ

ಸುಧಾಕರ್ ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಉಳಿದವರ ಮೇಲೆ ದೂರುವುದು ಇಡೀ ಸದನಕ್ಕೆ ತೋರಿದ ಅಗೌರವ. ಸಚಿವರ ಹೇಳಿಕೆಯನ್ನು ಖಂಡಿಸುತ್ತೇನೆ.

| ಸೌಮ್ಯರೆಡ್ಡಿ ಕಾಂಗ್ರೆಸ್ ಶಾಸಕಿ

ಮೊದಲೇ ರಾಜಕಾರಣಿಗಳು ಎಂದರೆ ಜನರಿಗೆ ಅಸಹನೆ ಶುರುವಾಗಿದೆ. ತಪ್ಪು ಮುಚ್ಚಿಕೊಳ್ಳುವ ಭರದಲ್ಲಿ ಎಲ್ಲರತ್ತ ಕೈ ತೋರಿಸುವುದು ಖಂಡನೀಯ.

| ಲಕ್ಷ್ಮಿ ಹೆಬ್ಬಾಳ್ಕರ್ ಕಾಂಗ್ರೆಸ್ ಶಾಸಕಿ

### ನಾವು ತನಿಖೆಗೆ ಒಳಪಡುತ್ತೇವೆ, ನೀವು?

ಸುಧಾಕರ್ ಆರೋಪದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಹಾಗೂ ಸ್ಪೀಕರ್ ಅವರಿಗೆ ಪತ್ರ ಬರೆದಿರುವ ಕಾಂಗ್ರೆಸ್ ಶಾಸಕರು, ಸಚಿವರಾಗಿರುವ ಸುಧಾಕರ್ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಹಾಲಿ ನ್ಯಾಯಮೂರ್ತಿ ಅವರಿಂದ ತನಿಖೆಯಾಗಲಿ, ಆ ತನಿಖೆಗೆ ಒಳಪಡಲು ನಾವು ಸಿದ್ದರಿದ್ದೇವೆ. 225 ಶಾಸಕರಲ್ಲಿ ನೀವು ಒಬ್ಬರಾಗಿರುವುದರಿಂದ ತನಿಖೆಗೆ ಸಿದ್ಧರಿದ್ದೀರಾ ಎಂದು ಪತ್ರದಲ್ಲಿ ಪ್ರಶ್ನಿಸಿದ್ದಾರೆ.